ಮಾತ್ರ ಒಪ್ಪುತ್ತಿದ್ದ ನರೇಂದ್ರ ಈಗ ಸಗುಣ, ಸಾಕಾರ ಕಾಳಿಯನ್ನು ಒಪ್ಪುತ್ತಾನೆ. ಇದು ಅವನ ಸಾಧನೆಯ ಒಂದು ಮಹತ್ವದ ಘಟ್ಟವಾಗುತ್ತದೆ. ಸತ್ಯವೂ ಶಾಶ್ವತವೂ ಆದ ಬದಲಾವಣೆಯನ್ನು ನಮ್ಮಲ್ಲಿ ಉಂಟುಮಾಡುವುದು ನೈಜ ಪ್ರಾರ್ಥನೆ.

ದೇವರಲ್ಲಿ ಸಂಪೂರ್ಣ ನಂಬಿಕೆ ಇಲ್ಲದವರು ಕೂಡ ಹೃದಯತುಂಬಿ ಪ್ರಾರ್ಥಿಸಿದಾಗ ಅವರ ವ್ಯಕ್ತಿತ್ವ ಬದಲಾಗಿ ನಂಬಿಕೆ ಮೂಡುತ್ತದೆ. ಇತರರಿಗಾಗಿ ಪ್ರಾರ್ಥಿಸಿದಾಗ ನಮ್ಮ ಮನಸ್ಸು ಮೃದುವಾಗುತ್ತದೆ, ಉನ್ನತವಾಗುತ್ತದೆ. ಶತ್ರುಗಳಿಗಾಗಿ ಪ್ರಾರ್ಥಿಸಿದಾಗ ದ್ವೇಷದ ನಿಷೇಧಾತ್ಮಕ ಪ್ರತಿಕ್ರಿಯೆಗಳಿಂದ ನಾವು ದೂರಾಗಿ, ನೆಮ್ಮದಿ ಬರುತ್ತದೆ. ಅವರು ಬದಲಾಗದಿದ್ದರೂ, ನಾವು ಆಗುತ್ತೇವೆ.


ಪ್ರಾರ್ಥನೆ ಎಂಬುದು ಬರಿಯ ಶಾಬ್ದಿಕ ಕಸರತ್ತಾದರೆ ಕ್ರಮೇಣ ಯಾಂತ್ರಿಕವಾಗಿಬಿಡುತ್ತದೆ. "ಪ್ರಾರ್ಥನೆ ಮಾಡಿದರೆ ಸಿಕ್ಕದ್ದು ಕೀರ್ತನೆ ಹೇಳಿದರೆ ಸಿಕ್ಕೀತೆ" ಎಂಬ ಗಾದೆಯನ್ನು ಕಿಟ್ಟೆಲ್ ಉದಾಹರಿಸಿದ್ದಾನೆ. ನಮ್ಮದೇ ಶಬ್ದಗಳ ಪ್ರಾರ್ಥನೆ ಅರ್ಥಪೂರ್ಣ. ಅದು ಕ್ರಮೇಣ ಶಬ್ದವನ್ನು ಮೀರಿ ಮಾನಸಿಕವಾಗುತ್ತದೆ, ಮೌನದಲ್ಲಿ ನಿಂತ ಹೃದಯದ ಕರೆಯಾಗುತ್ತದೆ. ಮಗು ತನ್ನ ನೋಟದಿಂದ ತಾಯೊಡನೆ ಒಂದಾಗುವಂತೆ ಭಕ್ತ ಇಂತಹ ಪ್ರಾರ್ಥನೆಯಿಂದ ಭಗವಂತನ ಸಾನ್ನಿಧ್ಯವನ್ನು ಅನುಭವಿಸುತ್ತಾನೆ.




## ಭಾವನಾತ್ಮಕ ಪ್ರಬುದ್ಧತೆ

ಮೂಲ ಇಂಗ್ಲಿಷ್ ಲೇಖಕರು : ಸ್ವಾಮಿ ದಯಾನಂದ ಸರಸ್ವತಿ
ಕನ್ನಡ ಅನುವಾದ : ಪ್ರೊ. ಟಿ.ಎಸ್. ವೆಂಕಣ್ಣಯ್ಯ
ಪ್ರಕಾಶಕರು: ತತ್ತ್ವದರ್ಶನ ಪ್ರಕಾಶನ, ವಿದ್ಯಾರಣ್ಯ ಫಾರಂ,
ಕಿಕ್ರೆ ಗ್ರಾಮ, ಭಾರತೀನಗರ ಅಂಚೆ, ಶೃಂಗೇರಿ – ೫೭೭ ೧೩೯
ಪುಟ: ೧೧೬; ಬೆಲೆ: ರೂ.೪೫/-

ಏರಿಳಿತಗಳು ಸಹಜವಾಗಿರುವ ಈ ಬದುಕಿನಲ್ಲಿ 'ವಿಷಮ ಸನ್ನಿವೇಶಗಳು' ಎದುರಾದಾಗ ವಿಭಿನ್ನ ವ್ಯಕ್ತಿಗಳು ಅವನ್ನು ನಿರ್ವಹಿಸುವ ರೀತಿ, ಕಂಡುಕೊಳ್ಳುವ ಪರಿಹಾರ ಅವರವರ ವೈಯಕ್ತಿಕ ಸ್ವಭಾವ, ಮುಖ್ಯವಾಗಿ ಅವರ ಭಾವನಾತ್ಮಕ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. ದೈಹಿಕವಾಗಿ ವ್ಯಕ್ತಿಗಳು ಬಲಿತಂತೆ ಮಾನಸಿಕವಾಗಿಯೂ ಸಹಜವಾಗಿ ಬಲಿಯುತ್ತಾರೆ ಎಂದುಕೊಳ್ಳಲು ಸಾಧ್ಯವಿಲ್ಲ. ಮನುಷ್ಯನೊಬ್ಬ ಭೌತಿಕವಾಗಿ ಪ್ರೌಢನಾಗಿದ್ದರೂ ಭಾವನಾತ್ಮಕವಾಗಿ ಶಿಶುವಾಗಿರಬಹುದು. ತನ್ನ ಅನುಭವಗಳಿಂದ ಪಕ್ವಗೊಂಡ ವ್ಯಕ್ತಿತ್ವವುಳ್ಳವನು ಮಾತ್ರ ಬದುಕಿನ ವಾಸ್ತವತೆಗಳನ್ನು ಸರಿಯಾಗಿ ವಸ್ತುನಿಷ್ಠವಾಗಿ ಗ್ರಹಿಸಲು ಸಾಧ್ಯ. ವಾಸ್ತವಗಳನ್ನು ಒಪ್ಪಿಕೊಂಡು, ಬಳಿಕ ಆ ವಾಸ್ತವಗಳಿಗೆ ಸ್ಪಂದಿಸುವವನೇ ಪ್ರಬುದ್ಧ ವ್ಯಕ್ತಿ ಎನಿಸಿಕೊಳ್ಳುತ್ತಾನೆ. ವ್ಯಕ್ತಿಯೊಬ್ಬನು ತನ್ನ ಗುಣಗಳು ಹಾಗೂ ಇತಿಮಿತಿಗಳಿಗೆ ಸಂಬಂಧಿಸಿದಂತೆ ಹೊಂದಿರುವ ವಸ್ತುನಿಷ್ಠವಾದ ಗ್ರಹಿಕೆಯೇ ಅವನು ಸಾಧಿಸಿರುವ ಆಂತರಿಕ ಪ್ರಬುದ್ಧತೆಯ ಪ್ರಮಾಣವಾಗಿರುತ್ತದೆ. ಈ ರೀತಿಯ ಗ್ರಹಿಕೆಗೆ ಅಗತ್ಯವಾಗಿರುವ ಜೀವನ-ದರ್ಶನವನ್ನು ಪರಿಚಯಿಸುವ ಅಪೂರ್ವ ಕೃತಿ ಭಾವನಾತ್ಮಕ ಪ್ರಬುದ್ಧತೆ. ವೇದಾಂತದ ಉದ್ದಾಮ ಗುರುಗಳು, ವಿಶ್ವಾದ್ಯಂತ ಆರ್ಷ ವಿದ್ಯೆಯ ಪ್ರಚಾರದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಪೂಜ್ಯ ಸ್ವಾಮಿ ದಯಾನಂದ ಸರಸ್ವತಿಯವರು ಹಲವು ವರ್ಷಗಳ ಹಿಂದೆ ಬರೋಡಾ ಮತ್ತು ಅಹಮದಾಬಾದ್‌ಗಳಲ್ಲಿ ನೀಡಿದ ಉಪನ್ಯಾಸಗಳನ್ನು ಆಧರಿಸಿ ಸಿದ್ಧಪಡಿಸಲಾದ *Emotional Maturity* ಎಂಬ ಪುಸ್ತಕದ ಕನ್ನಡ ಅನುವಾದವೇ ಪ್ರಸಕ್ತ ಕೃತಿ. ಈಗಾಗಲೇ ಸ್ವಾಮಿಗಳ *Points to Ponder* ಎಂಬ ಕೃತಿಯನ್ನು ಅನುವಾದಿಸಿರುವ ಅವರ ಅಭಿಮಾನಿಗಳೂ ಶೃಂಗೇರಿಯ ನಿವಾಸಿಗಳೂ ಆದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಅನುವಾದ ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ. ಸುಂದರ ರಕ್ಷಾಕವಚವಿದ್ದು ಮುದ್ರಣವೂ ಉತ್ತಮ ಗುಣಮಟ್ಟದ್ದಾಗಿದ್ದು ಕೃತಿ ಆಕರ್ಷಕವಾಗಿದೆ. ಆಧುನಿಕ ಬದುಕಿನಿಂದ ಹೆಚ್ಚುತ್ತಿರುವ ಭಾವನಾತ್ಮಕ ಸಮಸ್ಯೆಗಳಿಂದ ಬಳಲುತ್ತಿರುವ ಪ್ರತಿಯೊಬ್ಬರಿಗೂ ಸೂಕ್ತವಾದ ಪರಿಹಾರವನ್ನು ಕಂಡು ಕೊಳ್ಳುವಲ್ಲಿ ಈ ಗ್ರಂಥವು ತುಂಬಾ ಸಹಾಯಕವಾಗಿದೆ.




– ವಿಜಯಕುಮಾರ